<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.134/2022</u>

ದಿಃ 05.10.2023
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-1

| | | |
|---|---|---|
| ಹೆಸರು | ಃ | ಪ್ರವೀಣ್ ಕುಮಾರ್ |
| ತಂದೆಯ ಹೆಸರು | ಃ | ಗೋವಿಂದ ನಾಯಕ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಗಾರ್ಮೆಂಟ್ಸ್ |
| ವಾಸಸ್ಥಳ | ಃ | ವಿರೂಪಸಂದ್ರ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಚಾಸಾ 1 ನನ್ನ ಹೆಂಡತಿ.

2. ನನಗೆ ಚಾಸಾ 3 ರಿಂದ 6 ಸಹ ಗೊತ್ತು.

3. ನಾವು ಹಿಂದೂ ಲಂಬಾಣಿ ಜಾತಿಗೆ ಸೇರಿದವರಾಗಿರುತ್ತೇವೆ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೌಡ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

5. ಅವರಿಗೆ ನಮ್ಮ ಜಾತಿ ಗೊತ್ತು.

6. ದಿಃ 05.06.2022ರಂದು ರಾತ್ರಿ 9ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿಯಾದ ಚಾಸಾ 1 ಇವಳು ಮನೆಯಲ್ಲಿ ಊಟ ಮಾಡುತ್ತಿರುವಾಗ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಒಮ್ಮೀದೊಮ್ಮಲೇ ನಮ್ಮ ಮನೆಯ ಒಳಗೆ ನುಗ್ಗಿ ನಮ್ಮ

ಮೇಲೆ ಜಗಳ ಕಾಯ್ದು, ಅವಾಚ್ಯ ಶಬ್ದದಿಂದ ನನಗೆ ಮತ್ತು ನನ್ನ ಹೆಂಡತಿಗೆ ಬೈದು, ಕೈಗಳಿಂದ ಹಲ್ಲೆ ಮಾಡಿರುತ್ತಾರೆ.

7.ಅದೂ ಅಲ್ಲದೇ ಕೀಳು ಲಂಬಾಣಿ ಜಾತಿಯವರು ಎಂದೂ ಸಹ ಜಾತಿನಿಂದನೆ ಮಾಡಿರುತ್ತಾರೆ.

8. ನಾವು ಊರಲ್ಲಿ ಹೇಗೆ ಬದುಕುತ್ತೇವೆ ಎಂಬುದನ್ನು ನೋಡಿಕೊಳ್ಳುವುದಾಗಿ ಹೇಳಿ ನಮಗೆ ಬೆದರಿಕೆಯನ್ನೂ ಸಹ ಹಾಕಿರುತ್ತಾರೆ.

9.ಆ ಸಮಯದಲ್ಲಿ ಚಾಸಾ 3 ರಿಂದ 5 ಇವರು ಅಲ್ಲಿಗೆ ಬಂದು ಜಗಳ ನೋಡಿ ಬಿಡಿಸಿರುತ್ತಾರೆ.

10. ಆರೋಪಿತನು ಮೊದಲಿನಿಂದಲೂ ನಮ್ಮ ಜನಾಂಗದ ಮೇಲೆ ದೌರ್ಜನ್ಯ ಮಾಡುತ್ತಿದ್ದು ಆ ಕುರಿತು ನಾವು ಯಾವುದೇ ಕ್ರಮವನ್ನು ಜರುಗಿಸದೇ ಇದ್ದು, ನಂತರ ಒಂದು ಬಾರಿ ದೌರ್ಜನ್ಯ ನಡೆಸುವ ಸಮಯದಲ್ಲಿ ನಾನು ಮೊಬೈಲ್ ನಲ್ಲಿ ವಿಡಿಯೋ ಮಾಡುತ್ತಿದ್ದಾಗ ಅದನ್ನು ನೋಡಿ ಆರೋಪಿತರು ನಮ್ಮ ವಿರುದ್ಧ ವೈಷಮ್ಯ ಸಾಧಿಸಲು ಮೇಲೆ ಹೇಳಿದಂತೆ ಜಗಳ ಕಾಯ್ದು ಹಲ್ಲೆ ನಡೆಸಿರುತ್ತಾರೆ.

11. ನನಗೆ ಹಲ್ಲೆಯಿಂದ ಗಾಯವಾಗಿದ್ದರಿಂದ ರಾತ್ರಿ 9.30ರ ಸಮಯದಲ್ಲಿ ಸಾತನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇನೆ.

12. ನಂತರ ಸುಮಾರು 4-5 ದಿನಗಳ ನನ್ನ ಹೆಂಡತಿ ಚಾಸಾ 1 ಇವಳಿಗೆ ಮೈಕೈ ನೋವು ಬಂದಿದ್ದರಿಂದ ವೆಂಕಟರಾಯನದೊಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾಳೆ.

ಪಾಟೀ ಸವಾಲುಃ ಶ್ರೀ.ಎಸ್ ಎನ್., ವಕೀಲರಿಂದ 1ನೇ ಆರೋಪಿಯ ಪರವಾಗಿಃ

13. ನಾನು ಮತ್ತು ಆರೋಪಿತರು ಸ್ನೇಹಿತರು ಎಂಬುವುದು ಸರಿ.

14. ಮಾವಿನಕಾಯಿ ಕೊಯ್ಯಲು ಆರೋಪಿತರು ನಾವು ಕೂಡಿಯೇ ಕೆಲಸಕ್ಕೆ ಹೋಗುತ್ತಿರುತ್ತೇವೆ ಎಂಬುವುದು ಸರಿಯಲ್ಲ.

15.ದಿಃ 05.06.2022ರಂದು ರಾತ್ರಿ ಸಮಯದಲ್ಲಿ ಆರೋಪಿತರು ನಮ್ಮ ಮನೆಗೆ ಬಂದು ಮಾರನೇ ದಿನ ಮಾವಿನಕಾಯಿ ಕೊಯ್ಯಲು ಹೋಗುದಿದೆ ಎಂದು ನನಗೆ ಕರೆಯಲು ಬಂದಿದ್ದರು ಎಂಬುವುದು ಸರಿಯಲ್ಲ.

16. ನಮ್ಮ ಊರಿನಿಂದ ಸಾತನೂರು ಸುಮಾರು 7-8 ಕಿ.ಮೀ. ಅಂತರದಲ್ಲಿ ಇರುತ್ತದೆ.

17. ನನಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂಬುವುದು ಸರಿಯಲ್ಲ.

18. ಆ ದಿನ ಸದರಿ ಜಗಳ ಸುಮಾರು 15-20 ನಿಮಿಷಗಳ ಕಾಲ ನಡೆದಿರುತ್ತದೆ.

19. ಆ ದಿನ ನಾನು ಮತ್ತು ನಮ್ಮ ಮನೆಯ ಪಕ್ಕದವರಾದ ಬಾಲಾಜಿ ಆಸ್ಪತ್ರೆಗೆ ಹೋಗಿದ್ದೆವು.

20. ದಿಃ 05.06.2022 ರಂದು ರಾತ್ರಿ 9 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿಯಾದ ಚಾಸಾ 1 ಇವಳು ಮನೆಯಲ್ಲಿ ಊಟ ಮಾಡುತ್ತಿರುವಾಗ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಒಮ್ಮೇದೊಮ್ಮಲೇ ನಮ್ಮ ಮನೆಯ ಒಳಗೆ ನುಗ್ಗಿ ನಮ್ಮ ಮೇಲೆ ಜಗಳ ಕಾಯ್ದು, ಅವಾಚ್ಯ ಶಬ್ದದಿಂದ ನನಗೆ ಮತ್ತು ನನ್ನ ಹೆಂಡತಿಗೆ ಬೈದು, ಕೈಗಳಿಂದ ಹಲ್ಲೆ ಮಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

21.ಅದೂ ಅಲ್ಲದೇ ಕೀಳು ಲಂಬಾಣಿ ಜಾತಿಯವರು ಎಂದೂ ಸಹ ಜಾತಿನಿಂದನೆ ಮಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

22. ನಾವು ಊರಲ್ಲಿ ಹೇಗೆ ಬದುಕುತ್ತೇವೆ ಎಂಬುದನ್ನು ನೋಡಿಕೊಳ್ಳುವುದಾಗಿ ಹೇಳಿ ನಮಗೆ ಬೆದರಿಕೆಯನ್ನೂ ಸಹ ಹಾಕಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23.ಆ ಸಮಯದಲ್ಲಿ ಚಾಸಾ 3 ರಿಂದ 5 ಇವರು ಅಲ್ಲಿಗೆ ಬಂದು ಜಗಳ ನೋಡಿ ಬಿಡಿಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. ಆರೋಪಿತನು ಮೊದಲಿನಿಂದಲೂ ನಮ್ಮ ಜನಾಂಗದ ಮೇಲೆ ದೌರ್ಜನ್ಯ ಮಾಡುತ್ತಿದ್ದು ಆ ಕುರಿತು ನಾವು ಯಾವುದೇ ಕ್ರಮವನ್ನು ಜರುಗಿಸದೇ ಇದ್ದು, ನಂತರ ಒಂದು ಬಾರಿ ದೌರ್ಜನ್ಯ ನಡೆಸುವ ಸಮಯದಲ್ಲಿ ನಾನು ಮೊಬೈಲ್ ನಲ್ಲಿ ವಿಡಿಯೋ ಮಾಡುತ್ತಿದ್ದಾಗ ಅದನ್ನು ನೋಡಿ ಆರೋಪಿತರು ನಮ್ಮ ವಿರುದ್ಧ ವೈಷಮ್ಯ ಸಾಧಿಸಲು ಮೇಲೆ ಹೇಳಿದಂತೆ ಜಗಳ ಕಾಯ್ದು ಹಲ್ಲೆ ನಡೆಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25. ನನಗೆ ಹಲ್ಲೆಯಿಂದ ಗಾಯವಾಗಿದ್ದರಿಂದ ರಾತ್ರಿ 9.30ರ ಸಮಯದಲ್ಲಿ ಸಾತನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

26. ನಂತರ ಸುಮಾರು 4-5 ದಿನಗಳ ನನ್ನ ಹೆಂಡತಿ ಚಾಸಾ 1 ಇವಳಿಗೆ ಮೈಕೈ ನೋವು ಬಂದಿದ್ದರಿಂದ ವೆಂಕಟರಾಯನದೊಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾಳೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

21. ಈಗ ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಕೆಸಿಎಂ., ವಕೀಲರಿಂದ 2 ಮತ್ತು 3ನೇ ಆರೋಪಿಗಳ ಪರವಾಗಿಃಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಯಾವುದೇ ಸಕಾರಣವಿಲ್ಲದ್ದರಿಂದ ಮತ್ತು</u>

<u>ವಿನೋದ್ ಕುಮಾರ್ ವರ್ಸಸ್ ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ವಿಚಾರಣೆ ಮತ್ತು ಪಾಟೀ ಸವಾಲುಗಳನ್ನು ಒಂದೇ ದಿನದಂದು ಮಾಡಬೇಕೆಂದು ನಿರ್ದೇಶನವಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.